**ದಿನಾಂಕ: 30–04–2022 ರಂದು ಶನಿವಾರ ಬೆಳಗ್ಗೆ 10:30 ಘಂಟೆಗೆ ವಾರ್ಡ್ ಸಂಖ್ಯೆ:81 ವಿಜ್ಞಾನನಗರ ವಾರ್ಡಿನ M.E.G ಬಡಾವಣೆಯಲ್ಲಿರುವ ವಿವಿದೋದ್ದೇಶ ಕಟ್ಟಡದ ಸಭಾಂಗಣದಲ್ಲಿ ಶ್ರೀ.ಕೇಶವ್,ತೋಟಗಾರಿಕೆ ಅಧೀಕ್ಷಕರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಹಾಜರಿದ್ದ ಅಧಿಕಾರಿಗಳು :

| | |
|---|---|
| 1. | ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿ |
| 2. | ಶ್ರೀ. ರಾಘವೇಂದ್ರ . ಕೆ , ಹಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ. ಮೊಹಮ್ಮದ್ ಮುದಾಸಿರ್, ಸಹಾಯಕ ಅಭಿಯಂತರರು(ಬಿ.ಡಬ್ಲ್ಯೂಎಸ್.ಎಸ್.ಬಿ) |
| 4. | ಶ್ರೀ. ಅಮಿತ್.ಬಿ,ಸಿ , ಕಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀ. ಎಸ್.ಜಿ. ನಾಗರಾಜ್ ಮಾಜಿ ಪಾಲಿಕೆ ಸದಸ್ಯರು |
| 6. | ಶ್ರೀ. ಕ್ಯಾಪ್ಟನ್ ಸುರೇಂದ್ರ, ರಾಮಯ್ಯ ರೆಡ್ಡಿ ಬಡಾವಣೆ |
| 7. | ಶ್ರೀ.ಪ್ರಕಾಶ್, ಶಿವಗಂಗ ಬಡಾವಣೆ |
| 8. | ಶ್ರೀ. ಜಿ.ಗಣೇಶ್, ಅಬ್ಬಯ್ಯ ರೆಡ್ಡಿ ಬಡಾವಣೆ |
| 9. | ಶ್ರೀ. ಮನೋಜ್ ಕುಮಾರ್ , ಬೃಂದಾವನ್ ಬಡಾವಣೆ |
| 10. | ಶ್ರೀಮತಿ. ಗಿರಿಜಾ ಗಂಗಾಧರ್ , ರಾಮಯ್ಯ ರೆಡ್ಡಿ ಬಡಾವಣೆ |
| 11. | ಘನತ್ಯಾಜ್ಯ ನಿರ್ವಹಣೆಯ ಮೇಲ್ವಿಚಾರಕರು, |
| 12. | ನಿವಾಸಿ ಕ್ಷೇಮಾಭಿವೃದ್ಧಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು |

ಶ್ರೀ. ಸುರೇಶ್. ಎಲ್, ಕಿರಿಯ ಅಭಿಯಂತರರು, ವಾರ್ಡ್ ನಂ.81 ಹಾಗೂ ಸದಸ್ಯ ಕಾರ್ಯದರ್ಶಿಗಳು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ M.E.G ಬಡಾವಣೆಯಲ್ಲಿ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಶ್ರೀಮತಿ .ಗಿರಿಜಾ ಗಂಗಾಧರ್ ಮೊ: 9980520495 ರವರು ಮಾಹಿನಾಡಿ ರಾಮಯ್ಯ ರೆಡ್ಡಿ ಬಡಾವಣೆ "ಎ" ಸೆಕ್ಟರ್‌ನ ಮುಖ್ಯರಸ್ತೆಯಲ್ಲಿ ವಿದ್ಯುತ್‌ಶಕ್ತಿ ವ್ಯತ್ಯಾಸದಿಂದ ಆಗಿಂದಾಗ್ಗೆ ವಿದ್ಯುತ್ ತಂತಿಯು ನೆಲಕ್ಕೆ ಬೀಳುತ್ತಿದ್ದು ಯಾವುದೇ ಪ್ರಾಣ ಹಾನಿ ಆಗುವ ಮುನ್ನ ABC ಕೇಬಲ್‌ನ್ನು ಅಳವಡಿಸುವಂತೆ ಕೋರಿದರು.

ಕ್ಯಾಪ್ಟನ್ ಶ್ರೀ. ಸುರೇಂದ್ರ ಮೊ: 9902589470 ರವರು ಮಾತನಾಡಿ ಹಲವು ದಿನಗಳಿಂದ ಬಾಕಿ ಇದ್ದ ಬೆಂಗಳೂರು ಜಲಮಂಡಳಿಯಿಂದ ಅಳವಡಿಸಬೇಕಾಗಿದ್ದ ನೀರು ಸರಬರಾಜು ಪೈಪ್‌ನ್ನು ಈಗ ಅಳವಡಿಸುತ್ತಿದ್ದು. ಕೂಡಲೇ ರಸ್ತೆಯನ್ನು ಪುನರ್ ಸ್ಥಾಪಿಸಿ ಕೊಡುವಂತೆ ಕೋರಿದರು.

ಕ್ರಮ: ಸಹಾಯಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ) ಮತ್ತು ಬೆಸ್ಕಾಂ.
ಕಿರಿಯ ಅಭಿಯಂತರರು, ವಾರ್ಡ್–81. ವಿಜ್ಞಾನನಗರ

ಶ್ರೀ. ಮನೋಜ್ ಕುಮಾರ್, ಬೃಂದಾವನ್ ಬಡಾವಣೆ ರವರು ಮಾತನಾಡಿ ಈಗ ಬೇಸಿಗೆ ಕಾಲವಾಗಿರುವುದರಿಂದ ಸಸಿಗಳಿಗೆ ನೀರನ್ನು ಹಾಕುವಂತೆ ವಿನಂತಿಸಿದರು ಇದ್ದಕ್ಕೆ ತೋಟಗಾರಿಕಾ ಅಧೀಕ್ಷಕರು ಬೇಡಿಕೆ ಇರುವ ಕಡೆ ಮಾಹಿತಿ ನೀಡಿದಲ್ಲಿ ಖಂಡಿತವಾಗಿಯು ಟ್ಯಾಂಕರ್ ಮೂಲಕ ಗಿಡಗಳಿಗೆ ನೀರು ಸರಬರಾಜು ಮಾಡಲಾಗುವುದೆಂದು ತಿಳಿಸಿದರು.

ಕ್ರಮ: ತೋಟಗಾರಿಕೆ ವಿಭಾಗ

ವಾರ್ಡ್ ಸಂಖ್ಯೆ–81ರ ವಿಜ್ಞಾನನಗರ ವ್ಯಾಪ್ತಿಯ ಅಬ್ಬಯ್ಯ ರೆಡ್ಡಿ ಬಡಾವಣೆ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ ಕಳ್ಳರ ಕಾಟ ಹೆಚ್ಚಾಗಿದ್ದು ಕೂಡುರಸ್ತೆಗಳಲ್ಲಿ ಸಿಸಿ ಕ್ಯಾಮರಗಳನ್ನು ಅಳವಡಿಸುವಂತೆ ಹಾಗೂ ರಾತ್ರಿವೇಳೆಯಲ್ಲಿ ಪೋಲೀಸ್ ಗಸ್ತು ವಾಹನವನ್ನು ಚಾಲ್ತಿಯಲ್ಲಿಡಲು ಕೋರಿದರು.

ಕ್ರಮ: ಪೋಲೀಸ್ ಇಲಾಖೆ

ರಸ್ತೆ ಕಾಮಗಾರಿಗಳನ್ನು ನಿರ್ವಹಿಸುವ ಸಮಯದಲ್ಲಿ ಹಾಲಿ ಇರುವ ರಸ್ತೆಯ ಮೇಲ್ಮೈಯನ್ನು ತೆಗೆದು ಡಾಂಬರಾಗಲಿ/ ಕಾಂಕ್ರೀಟ್ ರಸ್ತೆಯಾಗಲಿ ಅಳವಡಿಸಬೇಕೆಂದು ನಿವಾಸಿ ಕ್ಷೇಮಾಭಿವೃದ್ಧಿ ಸಂಘ/ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ನಿವಾಸಿಗಳು ಹಾಗೂ ಸಾರ್ವಜನಿಕರು ಸಭೆಯಲ್ಲಿ ವಿನಂತಿಸಿದರು.

ಕ್ರಮ: ಕಿರಿಯ ಅಭಿಯಂತರರು, ವಾರ್ಡ್–81.ವಿಜ್ಞಾನನಗರ

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.81,ವಿಜ್ಞಾನ ನಗರ

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು